ದಿನಾಂಕಃ 26-05-2023
ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**<u>ಪಾಟೀ ಸವಾಲುಃ- ವಾದಿ ಪರ Sri MCR ವಕೀಲರಿಂದಃ</u>**

ದಾವಾ ಐಟಂ ನಂ.2 ರ ಸ.ನಂ. 254/3 ಆಗಿರುತ್ತದೆ. ಸದರಿ ಸ್ವತ್ತಿನ ಪೂರ್ವಕ್ಕೆ ರಾಮಕೃಷ್ಣಯ್ಯ ಪಶ್ಚಿಮಕ್ಕೆ ಸರ್ಕಾರಿ ಜಮೀನು, ಉತ್ತರಕ್ಕೆ ಮುದ್ದಯ್ಯ, ದಕ್ಷಿಣಕ್ಕೆ ನಾಗಪ್ಪ ಬಿನ್ ಮುದ್ದಯ್ಯರವರ ಜಮೀನು ಇರುತ್ತದೆ. ಈ ಜಮೀನಿಗೆ ಹೊಂದಿಕೊಂಡಂತೆ ನನಗೆ ಸೇರಿದ ಯಾವುದೇ ಜಮೀನು ಇರುವುದಿಲ್ಲ ಎಂದರೆ ಸರಿ.

ಕೊಳವೆ ಬಾವಿಯನ್ನು ಕೊರೆಸಿ ಸುಮಾರು 20 ವರ್ಷಗಳಾಗಿರಬಹುದು. ಸದರಿ ಜಮೀನಿನಲ್ಲಿ 150 ತೆಂಗಿನ ಮರಗಳು ಇರುತ್ತದೆ. ಸದರಿ ಮರಗಳು ಸುಮಾರು 15 ವರ್ಷ ವಯಸ್ಸಿನ ಮರಗಳಾಗಿರುತ್ತದೆ. ನನಗೆ ಕೊಳವೆ ಬಾವಿಗೆ ಸಂಬಂಧಪಟ್ಟ ವಿದ್ಯುತ್ ಸಂಪರ್ಕದ ಸಂಖ್ಯೆಯನ್ನು ಹೇಳಲು ಬರುವುದಿಲ್ಲ.

ಈ ದಾವೆಯನ್ನು ಯಾವ ಉದ್ದೇಶಕ್ಕಾಗಿ ವಾದಿ ಸಲ್ಲಿಸಿರುತ್ತಾರೆ ಎಂಬ ವಿಷಯ ನನಗೆ ಗೊತ್ತಿರುವುದಿಲ್ಲ. ಈ ದಾವೆಯನ್ನು ಯಾರು ಯಾರ ವಿರುದ್ಧ ಹಾಗೂ ಎಷ್ಟು ಸ್ವತ್ತುಗಳಿಗೆ ಸಂಬಂಧಪಟ್ಟಂತೆ ಸಲ್ಲಿಸಲಾಗಿರುತ್ತದೆ ಎಂದು ನನಗೆ ಗೊತ್ತಿರುವುದಿಲ್ಲ. ನಾನು ಚಂದ್ರೇಗೌಡರ ಮಾತು ಕೇಳಿ ಈ ದಿನ ಸಾಕ್ಷ್ಯ ನುಡಿಯಲು ಬಂದಿರುತ್ತೇನೆ ಎಂದರೆ ಸರಿಯಲ್ಲ. ನಾನು ಮತ್ತು ಚಂದ್ರೇಗೌಡರವರು ಒಂದೇ ಮತಸ್ಥರು ಎಂದರೆ ಸರಿ . ಆದಕಾರಣ, ನಾನು ಈ ದಿನ ಅವರ ಪರವಾಗಿ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಸದರಿ ಸ್ವತ್ತಿನಲ್ಲಿ ಚಂದ್ರೇಗೌಡ ಸ್ವಾಧೀನದಲ್ಲಿರುವುದಿಲ್ಲ ಬದಲಾಗಿ ಹೇಮಂತ್ ಕುಮಾರ್ ರವರು ಸ್ವಾಧೀನದಲ್ಲಿರುತ್ತಾರೆ ಎಂದರೆ ಸರಿಯಲ್ಲ. ಈ ದಾವೆಯ ಬಗ್ಗೆ ನನಗೇನೂ ಗೊತ್ತಿಲ್ಲದೇ ಇದ್ದರೂ ಸಹ 4 ನೇ ಪ್ರತಿವಾದಿಗೆ ಸಹಾಯ ಮಾಡಲು ಆತನೇ ಸ್ವಾಧೀನದಲ್ಲಿರುತ್ತಾರೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 4 ನೇ ಪ್ರತಿವಾದಿಯ ಕ್ರಯಪತ್ರಕ್ಕೆ ಸಾಕ್ಷಿಯಾಗಿ ಸಹಿ ಮಾಡಿರುವುದಿಲ್ಲ . 4 ನೇ ಪ್ರತಿವಾದಿ ದಿನಾಂಕಃ 12-05-2001 ರಲ್ಲಿ ಕ್ರಯಕ್ಕೆ ಕೊಂಡಿರಬಹುದು. 4 ನೇ ಪ್ರತಿವಾದಿಗೆ ಅನುಕೂಲ ಮಾಡಿಕೊಡುವ ಉದ್ಧೇಶದಿಂದ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ-** ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ. ಶಿರಾ.